/00

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: ಶ್ರೀ ಮೀರ್ ಇಕ್ಬಾಲ್ ಹುಸೇನ್**, ಬಿನ್ ಮೀರ್ ತಾಹೇರ್ ಹುಸೇನ್, ನಂ.3, 5ನೇ ಅಡ್ಡರಸ್ತೆ, ಭೂಪಸಂದ್ರ, ಬೆಂಗಳೂರು-560 094, ಇವರನ್ನು ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರ ಆಪ್ತ ಶಾಖೆಯಲ್ಲಿ ಖಾಲಿ ಇರುವ **ಆಪ್ತ ಸಹಾಯಕರ ಹುದ್ದೆಗೆ** ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 125 ಸಿಸನೇ 2002 ದಿನಾಂಕ:27.11.2002.
2) ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 237 ಆಸಿಸೇ 2012, ದಿನಾಂಕ 27.07.2012
3) ಸರ್ಕಾರದ ಅಧಿಸೂಚನೆ ಸಂಖ್ಯೆ:ಪಿಡಿ 48 ಪಿಎಸ್‌ಡಿ 2014 ದಿನಾಂಕ:13.06.2014
4) ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಆಸುಇ 78 ಸಿಸನೇ 2014 ದಿನಾಂಕ:16.06.2014
5) ಉಪಾಧ್ಯಕ್ಷರ ಟಿಪ್ಪಣಿ ಸಂಖ್ಯೆ ಕರಾಯೋಮಂ/01/ಆಶಾ/2014 ದಿನಾಂಕ13.06.2014

**ಪ್ರಸ್ತಾವನೆ :**

ಮೇಲೆ ಓದಲಾದ (1) ರ ಸರ್ಕಾರಿ ಆದೇಶದಲ್ಲಿ ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರ ಆಪ್ತ ಶಾಖೆಗೆ 12 ವಿವಿಧ ದರ್ಜೆಯ ಹುದ್ದೆಗಳನ್ನು ನಿಯೋಜನೆ / ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ (2) ರ ಅಧಿಕೃತ ಜ್ಞಾಪನದಲ್ಲಿ ಮಾನ್ಯ ಮುಖ್ಯಮಂತ್ರಿಯವರ ಸಚಿವಾಲಯ/ಸಚಿವರ/ವಿಧಾನ ಸಭೆ/ವಿಧಾನ ಪರಿಷತ್ತು/ರಾಜ್ಯ ಸಭೆ/ಲೋಕ ಸಭೆ ಸದಸ್ಯರ ಆಪ್ತ ಸಿಬ್ಬಂದಿ ಶಾಖೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಚಿತ ವೇತನವನ್ನು ಪರಿಷ್ಕರಿಸಲಾಗಿರುತ್ತದೆ.

ಮೇಲೆ ಓದಲಾದ (3) ಮತ್ತು (4) ರ ಸರ್ಕಾರದ ಅಧಿಸೂಚನೆಗಳಲ್ಲಿ ಶ್ರೀ ಸಿ.ಎಂ.ಇಬ್ರಾಹಿಂ, ಮಾಜಿ ಸಚಿವರು, ಇವರನ್ನು ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರನ್ನಾಗಿ ನೇಮಿಸಲಾಗಿದೆ ಹಾಗೂ ಅವರಿಗೆ ಸಚಿವ ಸಂಪುಟ ದರ್ಜೆಯ ಸ್ಥಾನಮಾನವನ್ನು ನೀಡಲಾಗಿರುತ್ತದೆ.

ಮಾನ್ಯ ಉಪಾಧ್ಯಕ್ಷರು, ರಾಜ್ಯ ಯೋಜನಾ ಮಂಡಳಿ, ಇವರು ತಮ್ಮ ಆಪ್ತ ಶಾಖೆಗೆ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ಇಚ್ಛಿಸಿದ್ದು ಮೇಲೆ ಓದಲಾದ (5) ರ ಟಿಪ್ಪಣಿಯಲ್ಲಿ, ಶ್ರೀ ಮೀರ್ ಇಕ್ಬಾಲ್ ಹುಸೇನ್, ಬಿನ್ ಮೀರ್ ತಾಹೇರ್ ಹುಸೇನ್, ನಂ.3 5ನೇ ಅಡ್ಡರಸ್ತೆ, ಭೂಪಸಂದ್ರ , ಬೆಂಗಳೂರು-560 094 ಇವರನ್ನು ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರ ಆಪ್ತ ಶಾಖೆಯಲ್ಲಿ ಖಾಲಿ ಇರುವ **ಆಪ್ತ ಸಹಾಯಕರ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ದಿನಾಂಕ: 13.06.2014** ರಿಂದ ಜಾರಿಗೆ ಬರುವಂತೆ ನೇಮಕ ಮಾಡಲು ಕೋರಿರುತ್ತಾರೆ.

ಆದರಂತೆ ಈ ಆದೇಶ

**ಸರ್ಕಾರಿ ಆದೇಶ ಸಂಖ್ಯೆ:ಪಿಡಿ 20 ಎಸ್‌ಪಿಬಿ 2014, ಬೆಂಗಳೂರು, ದಿನಾಂಕ: 28/06/2014**

ಮೇಲ್ಕಂಡ ವಿಷಯವನ್ನು ಪರಿಶೀಲಿಸಿದ ಸರ್ಕಾರವು, ಶ್ರೀ ಮೀರ್ ಇಕ್ಬಾಲ್ ಹುಸೇನ್, ಬಿನ್ ಮೀರ್ ತಾಹೇರ್ ಹುಸೇನ್, ನಂ.3 5ನೇ ಅಡ್ಡರಸ್ತೆ, ಭೂಪಸಂದ್ರ, ಬೆಂಗಳೂರು-560 094, ಇವರನ್ನು

ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರ ಆಪ್ತ ಶಾಖೆಯಲ್ಲಿ ಖಾಲಿ ಇರುವ **ಆಪ್ತ ಸಹಾಯಕರ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ದಿನಾಂಕ: 16.06.2014 ರಿಂದ ಜಾರಿಗೆ ಬರುವಂತೆ ನೇಮಕ ಮಾಡಲಾಗಿದೆ.**

**ಒಪ್ಪಂದದ ನೇಮಕಾತಿಯ ನಿಬಂಧನೆ ಹಾಗೂ ಷರತ್ತುಗಳು ಈ ಕೆಳಕಂಡಂತಿವೆ.**

1. **ಶ್ರೀ ಮೀರ್ ಇಕ್ಬಾಲ್ ಹುಸೇನ್ ಇವರ ಗುತ್ತಿಗೆ ನೇಮಕಾತಿ ಅವಧಿಯು ದಿನಾಂಕ 16.06.2014 ರಿಂದ ಮಾನ್ಯ ಉಪಾಧ್ಯಕ್ಷರ ಅವಧಿಯವರೆಗೆ ಇದ್ದು ಇದೊಂದು <u>ತಾತ್ಕಾಲಿಕ ನೇಮಕಾತಿ</u> ಆಗಿರುತ್ತದೆ.**

2. ಇವರ ಗುತ್ತಿಗೆ ನೇಮಕಾತಿಗೆ **ಮಾಸಿಕ ರೂ. ರೂ.16,000 (ಹದಿನಾರು ಸಾವಿರ ರೂಪಾಯಿಗಳು ಮಾತ್ರ)**ಗಳ ಕ್ರೋಢೀಕೃತ ವೇತನವನ್ನು ನಿಗದಿ ಪಡಿಸಲಾಗಿದೆ. ಇದಲ್ಲದೆ, **ಇನ್ನಿತರ ಯಾವುದೇ ಭತ್ಯೆಗಳಿಗೂ ಇವರು ಅರ್ಹರಾಗಿರುವುದಿಲ್ಲ.**

3. ಸದರಿ ಗುತ್ತಿಗೆ ನೌಕರರು ಸಾರ್ವಜನಿಕ ಹಿತ ದೃಷ್ಟಿಯಿಂದ ಪ್ರಯಾಣ ಮಾಡಬೇಕಾದಲ್ಲಿ ಮಾತ್ರ ಇವರು ನೇಮಕಾತಿ ಹೊಂದಿರುವ ಹುದ್ದೆಯ ಕಾಲಿಕ ವೇತನ ಶ್ರೇಣಿಯ ಕನಿಷ್ಠ ವೇತನದ ಮೇಲೆ ನಿಯಮಾನುಸಾರ ಲಭ್ಯವಿರುವ ಪ್ರಯಾಣಭತ್ಯೆ ಮತ್ತು ದಿನಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.

4. ಸದರಿ ಗುತ್ತಿಗೆ ನೌಕರರು **ವಾರ್ಷಿಕ 15 ದಿವಗಳ ಸಾಂದರ್ಭಿಕ ರಜೆಯನ್ನು ಮಾತ್ರ ಪಡೆಯಲು** ಅರ್ಹರಾಗಿರುತ್ತಾರೆ.

5. ಒಪ್ಪಂದದ ಷರತ್ತು ಮತ್ತು ನಿಬಂಧನೆಗಳಲ್ಲಿ ನೀಡಿರುವ ಸೌಲಭ್ಯಗಳ ಹೊರತಾಗಿ **ಬೇರಾವುದೇ ಸೌಲಭ್ಯಕ್ಕೆ ಅಂದರೆ ವೇತನ ಬಡ್ತಿ, ಪದೋನ್ನತಿ, ಪಿಂಚಣಿ ಇತ್ಯಾದಿ ಸೌಲಭ್ಯಗಳಿಗೆ ಸದರಿ ಗುತ್ತಿಗೆ ನೌಕರರು ಅರ್ಹರಾಗಿರುವುದಿಲ್ಲ.**

6. ಸದರಿ ನೌಕರರ ದುರ್ವರ್ತನೆ, ನಿರ್ಲಕ್ಷತೆಯ ನಿಮಿತ್ತ ಸರ್ಕಾರಕ್ಕೆ ನಷ್ಟವು ಉಂಟಾದಲ್ಲಿ ಈ ಎಲ್ಲಾ ನಷ್ಟಗಳನ್ನು ಸದರಿ ನೌಕರರು ಭರಿಸಿಕೊಡಲು ಬದ್ಧರಾಗಿರತಕ್ಕದ್ದು.

7. ಸದರಿ ಗುತ್ತಿಗೆ ನೇಮಕಾತಿಯನ್ನು **ಯಾವುದೇ ಕಾರಣಕ್ಕೂ ಖಾಯಂ ಎಂದು ಪರಿಗಣಿಸಲಾಗುವುದಿಲ್ಲ.** ಇವರು ತಮ್ಮ ಕರ್ತವ್ಯ, ಕಾರ್ಯ ಮತ್ತು ಪ್ರಕಾರ್ಯಗಳನ್ನು ಶ್ರದ್ಧೆ, ಭಕ್ತಿ ಮತ್ತು ಆಸಕ್ತಿಯಿಂದ ನೆರವೇರಿಸತಕ್ಕದ್ದು.

8. ಇವರು ಕರ್ತವ್ಯವನ್ನು ಪಾಲಿಸುತ್ತಿರುವಾಗ ಅಥವಾ ನೆರವೇರಿಸುತ್ತಿರುವಾಗ ಇವರಿಗೆ ಲಭ್ಯವಾಗಬಹುದಾದ ಅಥವಾ ದೊರಕಬಹುದಾದ ಅಧಿಕೃತ ಮಾಹಿತಿಯನ್ನು ಗೌಪ್ಯವಾಗಿಟ್ಟು ಕಟ್ಟುನಿಟ್ಟಾಗಿ ಪಾಲಿಸಬೇಕು.

9. 1966ರ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ ಮತ್ತು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗೆ ಇವರು ಬದ್ಧರಾಗಿರುತ್ತಾರೆ.

10. ಈ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಗುತ್ತಿಗೆ ನೇಮಕಾತಿಯು ತಾನಾಗಿಯೇ ಮುಕ್ತಾಯವಾಗುತ್ತದೆ.

98

11. ಇವರ ದುರ್ನಡತೆಯಿಂದಾಗಲೀ ಅಥವಾ ನಿರ್ಲಕ್ಷ್ಯತೆ, ಉದಾಸೀನತೆಯಿಂದಾಗಲೀ ಸರ್ಕಾರಕ್ಕೆ ಸಂಬಂಧಿಸಿದಂತೆ ಆರ್ಥಿಕ ನಷ್ಟ ಉಂಟಾದಲ್ಲಿ ಇದನ್ನು ಸರ್ಕಾರಕ್ಕೆ ತುಂಬಿಕೊಡಲು ಸದರಿಯವರು ಬದ್ಧರಾಗಿರತಕ್ಕದ್ದು.

12. ಈ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ **ರೂ.50/- (ಐವತ್ತು ರೂಪಾಯಿಗಳು)ಗಳ ಮೌಲ್ಯದ ಛಾಪಾ ಕಾಗದದಲ್ಲಿ** ಸದರಿ **ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳನ್ನು ಒಳಗೊಂಡಿರುವ ಕರಾರು ಪತ್ರವನ್ನು ಕ್ರಮಬದ್ಧ ರೀತಿಯಲ್ಲಿ ಸದರಿ ನೌಕರರು ತಮ್ಮ ಒಪ್ಪಿಗೆಯನ್ನು ನಮೂದಿಸಿ ಸಲ್ಲಿಸತಕ್ಕದ್ದು ಹಾಗೂ ವಿದ್ಯಾರ್ಹತೆಯ ಮೂಲ ಪ್ರತಿಗಳನ್ನು ಸಲ್ಲಿಸತಕ್ಕದ್ದು.**

ಈ ಆದೇಶವನ್ನು ಆದೇಶ ಸಂಖ್ಯೆ ಪಿಡಿ 113 ಎಸ್‌ಪಿಎಂ 96, ದಿನಾಂಕ: 17.05.1997 ರಲ್ಲಿ ರಾಜ್ಯ ಯೋಜನಾ ಮಂಡಳಿಯ ಸದಸ್ಯ ಕಾರ್ಯದರ್ಶಿಯವರಿಗೆ ನೀಡಲಾದ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್ ಎಸ್ ಜಯಧರ)
ಸರ್ಕಾರದ ಅಧೀನ ಕಾರ್ಯದರ್ಶಿ-3
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ
22032623

ಇವರಿಗೆ

1. ಮಹಾಲೇಖಪಾಲರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು
2. ಮಾನ್ಯ ಉಪಾಧ್ಯಕ್ಷರ ಆಪ್ತ ಕಾರ್ಯದರ್ಶಿ, ರಾಜ್ಯ ಯೋಜನಾ ಮಂಡಳಿ
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಮತ್ತು ಪದನಿಮಿತ್ತ ಸದಸ್ಯ ಕಾರ್ಯದರ್ಶಿಗಳು, ರಾಜ್ಯ ಯೋಜನಾ ಮಂಡಳಿ, ಇವರ ಆಪ್ತಕಾರ್ಯದರ್ಶಿ
4. ಸರ್ಕಾರದ ಉಪ ಕಾರ್ಯದರ್ಶಿ, (ಆಡಳಿತ) ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ
5. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-6)
7. ಶ್ರೀ ಮೀರ್ ಇಕ್ಬಾಲ್ ಹುಸೇನ್, ಬಿನ್ ಮೀರ್ ರಾಹೇದ್ ಹುಸೇನ್, ನಂ.3 6ನೇ ಅಡ್ಡರಸ್ತೆ, ಬೋವಿಸಂದ್ರ, ಬೆಂಗಳೂರು-560 094, ಇವರಿಗೆ ವಿದ್ಯಾರ್ಹತೆಯ ಮೂಲ ಪ್ರತಿಗಳನ್ನು ಶಾಖೆಯಲ್ಲಿ ತೋರಿಸಿ, ಜೆರಾಕ್ಸ್ ಪ್ರತಿಗಳನ್ನು ಈ ಶಾಖೆಗೆ ಕೂಡಲೇ ನೀಡಲು ಸೂಚಿಸಿದೆ
8. ಲೆಕ್ಕಾಧಿಕಾರಿಗಳು, ಯೋಜನಾ ಇಲಾಖೆ, ಎಸ್-3
9. ಶಾಖೆಯ ರಕ್ಷಾ ಕಡತ ಹಾಗೂ ಹೆಚ್ಚುವರಿ ಪ್ರತಿಗಳು